O.S. ನಂಬರಃ 4/2019

ಡಿ. ಡಬ್ಲ್ಯೂಃ 2

ದಿಃ 20-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ನನ್ನ ಅಜ್ಜನ ಹೆಸರು ಹೊನ್ನಪ್ಪ ಇದ್ದು, ನನ್ನ ಅಜ್ಜಿಯ ಹೆಸರು ಹನುಮು ಇರುತ್ತದೆ. ಸದರಿ ಹೊನ್ನಪ್ಪ ಮತ್ತು ಹನುಮು ಇವರಿಂದಒಟ್ಟು 7 ಜನ ಮಕ್ಕಳು ಇದ್ದು, ಆ ಬಗ್ಗೆ ಒಬ್ಬರು ಮೃತರಾಗಿರುತ್ತಾರೆ. ಮೃತರಾದವರ ಹೆಸರು ನಾಗಮ್ಮ ಇರುತ್ತದೆ. ಸದರಿ ನಾಗಮ್ಮ ಇವಳು ಅವಿವಾಹಿತೆಯಾಗಿ ಮೃತಪಟ್ಟಿದ್ದು, ಅವರಿಗೆ ಯಾವುದೇ ಸಂತತಿ ಇರುವುದಿಲ್ಲ. ಉಳಿದ 6 ಮಂದಿಯ ಹೆಸರು ಕ್ರಮವಾಗಿ ಬೀರಮ್ಮ, ಶಿವಮ್ಮ, ವೆಂಕಮ್ಮ, ಬೀರಣ್ಣ, ನಾರಾಯಣ ಮತ್ತು ವೆಂಕಟ್ರಮಣ ಇರುತ್ತದೆ. ಈ ಪೈಕಿ ನಾರಾಯಣ ಇವರು ಜೀವಂತ ಇರುವುದಿಲ್ಲ. ನಾರಾಯಣ ಇವರಿಗೆ 4 ಜನ ಮಕ್ಕಳು ಇರುತ್ತಾರೆ. ನಾರಾಣಯಣ ಇವರ ಹೆಂಡತಿ ಹೆಸರು ಬೇಬಿ ಇರುತ್ತದೆ. ಈ ಪೈಕಿ ಬೀರಣ್ಣ ಸಹ ಮೃತರಾಗಿರುತ್ತಾರೆ. ನಾನು ಮತ್ತು 3ನೇ ಪ್ರತಿವಾದಿಯು ಮೃತ ಬೀರಣ್ಣ ಇವರ ಮಕ್ಕಳು ಇರುತ್ತೇವೆ. ನನ್ನ ಗಂಡನ ಹೆಸರು ಆತ್ಮಾರಾಮ ಗಣಪತಿ ನಾಯಕ ಇರುತ್ತದೆ. ನನ್ನ ತಂಗಿಯ ಗಂಡನ ಹೆಸರು ಶಾಂತಾರಾಮ ಬೀರಣ್ಣ ನಾಯಕ ಇರುತ್ತದೆ. ನಾನು ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ.

2. ವಾದ ಪತ್ರದಲ್ಲಿ ಮೃತ ನಾಗಮ್ಮ ಇವರನ್ನು ಹೊರತುಪಡಿಸಿ ಮೂಲ ಪುರುಷ ಹೊನ್ನಪ್ಪ ಬೀರಣ್ಣ ನಾಯಕ ಇವರ ಉಳಿದ ಎಲ್ಲ ಮಕ್ಕಳನ್ನು ಕವಲನ್ನು ಪ್ರತಿನಿಧಿಸುವ ವಾರುಸುದಾರರು ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ಅಜ್ಜ ಹೊನ್ನಪ್ಪ ಬೀರಣ್ಣ ನಾಯಕ ಇವರಿಗೆ ಹೇಗೆ ಬಂದಿರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.